**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ**

**ಸಿಸಿ ನಂ.145/2020**

**ಚಾಸಾ-8/ಪಿಡಬ್ಲೂ-4**

| | |
|---|---|
| **ಹೆಸರು** | ಶ್ರೀಕಾಂತ |
| **ತಂದೆ ಹೆಸರು** | ರಾಮು |
| **ವಯಸ್ಸು** | 42 ವರ್ಷಗಳು |
| **ಉದ್ಯೋಗ** | ಎ ಎಸ್ ಐ |
| **ವಾಸ ಸ್ಥಳ** | ಶಹಾಬಾದ |

**ದಿನಾಂಕ 18.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.**

2016 ರಿಂದ 2022 ರವರೆಗೆ ಮುಖ್ಯ ಪೇದೆಯಾಗಿ ಯಡ್ರಾಮಿ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 21.10.2019 ರಂದು ಚಾಸಾ-1 ರವರ ಆದೇಶದಂತೆ ಗುನ್ನೆ ನಂ.86/2019 ರಲ್ಲಿ ಜಪ್ತಿಪಡಿಸಿಕೊಂಡ 90 ml ಅಳತೆಯ 80 ಒರಿಜಿನಲ ಚಾಯ್ಸ ವಿಸ್ಕ ಪೌಚಗಳು ಮತ್ತು 330 ml ಅಳತೆಯ 5 ನಾಕಔಟ ಬೀಯರ ಬಾಟಲಿಗಳನ್ನಲು ರಾಸಾಯನಿಕ ಪರೀಕ್ಷೆಗಾಗಿ ನಾಗನಹಳ್ಳಿ ಕಲಬುರಗಿಗೆ ಹೋಗಿ ಆ ಕುರಿತು ವರದಿ ಸಲ್ಲಿಸಿರುತ್ತೇನೆ. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಗಳನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ

ಚಾಸಾ-1 ನನ್ನ ಮೇಲಾಧಿಕಾರಿ. ಸದರಿ ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡ ಮುದ್ದೆಮಾಲುಗಳನ್ನು ತೆಗೆದುಕೊಂಡು ಹೋಗಿ ವರದಿ ಪಡೆದು ಹಾಜರುಪಡಿಸಿರುತ್ತೇನೆಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ಕುಳಿತು ವರದಿ ಬರೆದು ಸಲ್ಲಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಜೇವರ್ಗಿ